**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ: ಇ-ಆಡಳಿತ ವರ್ಗಾವಣೆ-01/2016-17** **ದಿನಾಂಕ: 04-08-2016**

**ಸುತ್ತೋಲೆ**

**ವಿಷಯ:** 2016-17 ನೇ ಸಾಲಿಗೆ ಶಿಕ್ಷಕರ ಹಾಗೂ ಗ್ರೂಪ್ ಬಿ ಅಧಿಕಾರಿಗಳ ವರ್ಗಾವಣೆಯನ್ನು ಆನ್‌ಲೈನ್ ತಂತ್ರಾಂಶದ ಮೂಲಕ ಕೌನ್ಸಿಲಿಂಗ್ ಮಾಡಲು ಬ್ರಾಡ್ ಬ್ಯಾಂಡ್/ ಡೇಟಾ ಕಾರ್ಡ ಸಂಪರ್ಕ ವ್ಯವಸ್ಥೆ ಪಡೆದುಕೊಳ್ಳುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಸಿ3(7)ಪ್ರಾ.ಶಿ.ವರ್ಗ.01/2016-17 ದಿನಾಂಕ:01-08-2016.
2. ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಸಿ4(7)ಪ್ರಾ.ಶಿ.ವರ್ಗ.01/2016-17 ದಿನಾಂಕ:02-08-2016.
3. ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಸಿ1(4)ಸಪ್ರೌಮುಶಿ.ಸಾ.ವರ್ಗಾವಣೆ.26/2016-17 ದಿನಾಂಕ:02-08-2016.
4. ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಸಿ1(6)ಸಾ.ವರ್ಗಾ.ದೈಶಿ(ವಿಪ)ವೃ.ಶಿ/2016-17 ದಿನಾಂಕ:02-08-2016.

ಉಲ್ಲೇಖಿತ ಈ ಕಛೇರಿಯ ಜ್ಞಾಪನಗಳಲ್ಲಿ 2016-17 ನೇ ಸಾಲಿಗೆ ಶಿಕ್ಷಕರ ಹಾಗೂ ಗ್ರೂಪ್ ಬಿ ಅಧಿಕಾರಿಗಳ ವರ್ಗಾವಣೆಯನ್ನು ಅನ್ ಲೈನ್ ತಂತ್ರಾಂಶದ ಮೂಲಕ ವರ್ಗಾವಣೆ ಕೌನ್ಸಿಲಿಂಗ್ ನಿರ್ವಹಿಸುವ ಬಗ್ಗೆ ಮಾರ್ಗಸೂಚಿಯನ್ನು ನೀಡಲಾಗಿದೆ.

ಈ ಸಂಬಂದ ಸೂಕ್ತ ತಯಾರಿ ಮಾಡಿಕೊಂಡು ವರ್ಗಾವಣೆಯ ಪ್ರಕ್ರಿಯೆಯನ್ನು ನಡೆಸಲು ಸಂಪೂರ್ಣವಾಗಿ ಸಿದ್ಧರಿರಲು ಹಾಗೂ ಸದರಿ ವರ್ಗಾವಣೆ ಕೌನ್ಸಿಲಿಂಗ್‌ಗಾಗಿ ಬ್ರಾಡ್ ಬ್ಯಾಂಡ್/ಡೇಟಾಕಾರ್ಡ ಸೌಲಭ್ಯ ವ್ಯವಸ್ಥೆಗಾಗಿ, ಬಿ.ಎಸ್.ಎನ್.ಎಲ್/ಟಾಟಾ ಡೊಕೋಮೋ/ಏರ್‌ಟೆಲ್ ಅಥವಾ ನಿಮ್ಮ ಜಿಲ್ಲೆಯಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುವ ಸಂಸ್ಥೆಯ ವತಿಯಿಂದ ಕನಿಷ್ಟ **10(mbps)** ವೇಗ ಹೊಂದಿರುವ ಅಂತರಜಾಲ ವ್ಯವಸ್ಥೆಯನ್ನು ಆಗಸ್ಟ್ 2016 ರಿಂದ ವರ್ಗಾವಣೆ ಪ್ರಕ್ರಿಯೆ ಕೊನೆಯವರೆಗಿನ ಅವಧಿಗೆ ಕೂಡಲೇ ನಿಮ್ಮ ಹಂತದಲ್ಲಿಯೇ ಪಡೆಯಲು ತಿಳಿಸಲಾಗಿದೆ.

ಮುಂದುವರೆದಂತೆ, ಉಲ್ಲೇಖಿತ ಜ್ಞಾಪನಗಳಲ್ಲಿ ಪ್ರಸ್ತಾಪಿಸಿದ ದಿನಾಂಕಗಳಂತೆ ವರ್ಗಾವಣಾ ಕೌನ್ಸಿಲಿಂಗ್ ಪ್ರಕ್ರಿಯೆಯು ನಡೆಯಬೇಕಾಗಿದ್ದು, ಈಗ ಇಲಾಖೆಯ ವತಿಯಿಂದ ಒದಗಿಸಿರುವ ಐ.ಪಿ ವಿಳಾಸ **http://202.138.101.21/Mov2zp/TransferApplication/index.html** ವನ್ನು ಉಪಯೋಗಿಸಿಕೊಂಡು ಕೌನ್ಸಿಲಿಂಗ್ ಕಾರ್ಯದಲ್ಲಿ ಯಾವುದೇ ತೊಂದರೆಯಾಗದಂತೆ ಅಂತರ್ಜಾಲ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

ಅಂತೆಯೇ ಈ ರೀತಿಯಲ್ಲಿ ಅಂತರ್ಜಾಲ ವ್ಯವಸ್ಥೆಯಲ್ಲಿ ನಿಧಾನ ಗತಿಯ ಸಮಸ್ಯೆಯನ್ನು ಹೋಗಲಾಡಿಸುವ ಸಲುವಾಗಿ ಕೆಸ್ವಾನ್ ಸಂಪರ್ಕ ವ್ಯವಸ್ಥೆಯ ಮೂಲಕವೂ ಸಹಾ ವರ್ಗಾವಣಾ ಕೌನ್ಸಿಲಿಂಗ್ ಮಾಡಲು ಹೊಸದಾಗಿ ಐಪಿ **http://10.10.20.82/Mov2zp/TransferApplication/index.html** ನೀಡಿದ್ದು, ಇದರ ಲಿಂಕ್ ಅನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ. ಸದರಿ ಐಪಿಯನ್ನೂ ಸಹ ಉಪಯೋಗಿಸಿಕೊಂಡು ಅನ್‌ಲೈನ್ ಕೌನ್ಸಿಲಿಂಗ್ ಮಾಡಲು ಹಾಗೂ ಕ್ರಮವಹಿಸಿದ ಬಗ್ಗೆ ಕೂಡಲೇ ವರದಿಯನ್ನು ಈ ಕಛೇರಿಗೆ ನೀಡಲು ಈ ಮೂಲಕ ಸೂಚಿಸಿದೆ.

**ಸಹನಿರ್ದೇಶಕರು(ಆಡಳಿತ) ಹಾಗೂ**
**ಇ-ಆಡಳಿತ ನೋಡಲ್ ಅಧಿಕಾರಿಗಳು**

**ಇವರಿಗೆ**
**ರಾಜ್ಯದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ**

ಪ್ರತಿಯನ್ನು
1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಗೌರವಪೂರ್ವಕವಾಗಿ ನೀಡಿದೆ.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ನೀಡಿದೆ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಹಾಗೂ ದಾರವಾಡ ಇವರಿಗೆ ಮಾಹಿತಿಗಾಗಿ
4. ನಿರ್ದೇಶಕರು(ಪ್ರಾಥಮಿಕ) (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ ಇವರಿಗೆ ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯ ವರ್ಗಾವಣೆ ಕೌನ್ಸಿಲಿಂಗ್‌ಗಾಗಿ ಆಡಳಿತ ಶಾಖೆಯನ್ನು ಸಂಪರ್ಕಿಸಿ, ಬ್ರಾಡ್ ಬ್ಯಾಂಡ್/ಡೇಟಾಕಾರ್ಡ ಸೌಲಭ್ಯವನ್ನು ಪಡೆಯುವುದು ಅಥವಾ ತಮ್ಮ ಹಂತದಲ್ಲಿಯೇ ವ್ಯವಸ್ಥೆ ಮಾಡಿಕೊಳ್ಳಬಹುದಾಗಿದೆ.

5. ಸಹ ನಿರ್ದೇಶಕರು–1 ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯ ವರ್ಗಾವಣೆ ಕೌನ್ಸಿಲಿಂಗ್‌ಗಾಗಿ ಆಡಳಿತ ಶಾಖೆಯನ್ನು ಸಂಪರ್ಕಿಸಿ, ಬ್ರಾಡ್ ಬ್ಯಾಂಡ್/ಡೇಟಾಕಾರ್ಡ ಸೌಲಭ್ಯವನ್ನು ಪಡೆಯುವುದು ಅಥವಾ ತಮ್ಮ ಹಂತದಲ್ಲಿಯೇ ವ್ಯವಸ್ಥೆ ಮಾಡಿಕೊಳ್ಳಬಹುದಾಗಿದೆ.
6. ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
7. ಕಛೇರಿ ಪ್ರತಿ.